## ಬಟ್ಟೆಗಂಟಿದ ಬೆಂಕಿ



‘ಕೇಳು ಹುಡುಗಿ / ಬಟ್ಟೆಗಟ್ಟಿದೆ ಬೆಂಕಿ / ತೊಟ್ಟರು ಸುಡುವೆ / ತೊಡದಿದ್ದರು ಈ ಸಭ್ಯರ ಕಣ್ಣಲ್ಲಿ’ – ಈ ಅರಿವು ಮತ್ತು ಸಂಕಟವನ್ನು ಧ್ಯಾನವಾಗಿಸಿಕೊಂಡಂತೆ ಕಾಣುವ ‘ಬಟ್ಟೆಗಟ್ಟಿದ ಬೆಂಕಿ’ ಸಂಕಲನದ ಕವಿತೆಗಳು, ಸಿದ್ಧಲಿಂಗಯ್ಯನವರ ಕಾವ್ಯದ ಆಕ್ರೋಶ ಮತ್ತು ಲಯವನ್ನು ನೆನಪಿಸುವಂತಿವೆ.

‘ಬಟ್ಟೆಗಟ್ಟಿದ ಬೆಂಕಿ’ ವಿಶಾಲ್ ಮ್ಯಾಸರ್ ಅವರ ಚೊಚ್ಚಿಲ ಸಂಕಲನ. ವರ್ತಮಾನದ ತವಕತಲ್ಲಣಗಳಿಗೆ ಆಕ್ರೋಶ ಮತ್ತು ಭಾವುಕತೆಯಿಂದ ಪ್ರತಿಕ್ರಿಯಿಸುವಾಗಲೂ, ಕಾವ್ಯದ ಲಯ ಉಳಿಸಿಕೊಂಡಿರುವ ಕಾರಣದಿಂದಾಗಿ ವಿಶಾಲ್ ಕವಿತೆಗಳು ಕುತೂಹಲ ಹುಟ್ಟಿಸುತ್ತವೆ. ಪ್ರಖರ ರಾಜಕೀಯ ಪ್ರಜ್ಞೆ ಅವರ ಕವಿತೆಗಳ ಹೊಳಪನ್ನು ಹೆಚ್ಚಿಸಿದೆ. ‘ಆಕಾಶನೆಲ್ಲ ಇಲ್ಲಿ ರಸ್ತೆಗಿಳಿಸವ್ರೆ / ಡಾಂಬರ್ ಮ್ಯಾಲೆ ನೀಲಿ ಬಣ್ಣ ಸಾರ್ಸವ್ರೆ / ನಕ್ಷತ್ರಗಳ್ನ ರಂಗೋಲೆ ಬಿಟ್ಟವ್ರೆ’ ಸಾಲುಗಳ ‘ನನ್ ಜನ ಬರ್ತಾವ್ರೆ’ ಕವಿತೆ, ವಿಶಾಲ್ ಅವರ ಕವಿತೆಯ ಸೊಗಸು ಹಾಗೂ ಅವರು ಮೀರಬಹುದಾದ ಚೌಕಟ್ಟು ಎರಡನ್ನೂ ಸೂಚಿಸುವಂತಹದ್ದು.

‘ಬರಿಯ ರಾಜಕೀಯವ್ವೋ’ ಕವಿತೆ, ನನ್ನ ಜನ ಗಂಗಾಳ ಬಡೆಯುತ್ತಿರುವುದು ಹೊಟ್ಟೆಯ ಹಸಿವಿನಿಂದಲ್ಲ; ದೊರೆಯ ಹುಚ್ಚು ಮಾತಿಗೆ ಎನ್ನುವ ಕಟು ವಾಸ್ತವವನ್ನು ಕಟ್ಟಿಕೊಡುತ್ತದೆ. ‘ಕೊಂದುಕೊಂಡು ಸಾಯುತಿಹರು / ಧರ್ಮ ಎದೆಯಮೇಲೆ ಹೂವಾಗಲಿಲ್ಲವ್ವೋ’ ಎನ್ನುವ ವಿಷಾದ ಇಲ್ಲಿದೆ. ಕಾವ್ಯದ ಬಗೆಗಿನ ಗಾಢಪ್ರೀತಿಯನ್ನು ಸಂಕಲನದ ರಚನೆಗಳಲ್ಲಿ ಗಮನಿಸಬಹುದು. ಆದರೆ, ಉದ್ದಕ್ಕೂ ನುಸುಳಿರುವ ಕಾಗುಣಿತ ದೋಷಗಳು ಕಾವ್ಯದ ರುಚಿಯನ್ನು ಮಸುಕಾಗಿಸುವಂತಿವೆ.

**ಲೇ: ವಿಶಾಲ್ ಮ್ಯಾಸರ್; ಪು: 62; ಬೆ: ₹ 80; ಪ್ರ: ದುಡಿಮೆ ಪ್ರಕಾಶನ; ಫೋನ್: 6363612399**

## ಸಾವಿರಾರು ದನಿಗಳು




ದಲಿತಕವಿ ಸಿದ್ಧಲಿಂಗಯ್ಯನವರು ನಿಧನರಾಗಿ ಒಂದು ವರ್ಷ ತುಂಬುವ ವೇಳೆಗೆ ಪ್ರಕಟಗೊಂಡಿರುವ ‘ಸಾವಿರಾರು ದನಿಗಳು’ ಕೃತಿ, ಸಹೃದಯರ ಮನಸ್ಸಿನಲ್ಲಿ ನೆಲೆಸಿರುವ ಕವಿಗೆ ಸಂದಿರುವ ಕಾವ್ಯಗೌರವ. ಅರವತ್ತೆರಡು ಕವಿಗಳು, ತಮ್ಮ ಪ್ರೀತಿಯ ಕವಿಯನ್ನು ಕಾವ್ಯದ ಸಾಲುಗಳಲ್ಲಿ ಮೂಡಿಸುವ ಪ್ರೀತಿಯ ಕೆಲಸ ಮಾಡಿದ್ದಾರೆ.

ಸಂಕಲನದ ಮೊದಲ ಕವಿತೆ, ಚಂದ್ರಶೇಖರ ತಾಳ್ಯರ ‘ಒಡಲ ನೋವಿನ ಹಾಡು’. ಈ ಶೀರ್ಷಿಕೆಯ ಧ್ವನಿ ಸಂಕಲನದುದ್ದಕ್ಕೂ ಅನುರಣಿಸಿದೆ. ‘ಯಾತರದು ಈ ಬಾಳು ಎಂದು ತೆಗೆದೆಸೆವಂತೆ / ಹೊಸ ನೂಲು ನೂತವನೆ / ಬೆಳ್ಳಿ ಕಿರಣವು ಸುಟ್ಟ ಅಂಗನೆಯ ಸೆರಗಿನಲಿ / ಭರವಸೆಯ ರಶ್ಮಿಗಳ ಹರಡಿದವನೆ’ ಎನ್ನುವ ನೋಟವೇ ಸಂಕಲನದಲ್ಲಿ ಹಲವು ರೂಪಗಳಲ್ಲಿ ಅಭಿವ್ಯಕ್ತಿಗೊಂಡಿದೆ. ‘ಕವಿ ಸತ್ತು ಕಾಲವಾಯಿತು ಅಂದುಕೊಂಡವರ / ಮಾತನಣಕಿಸಿ ತೋರಿದೆ ಬಡವರ ನಗುವಿನ ಶಕ್ತಿ’ ಎನ್ನುವ ಎಸ್.ಜಿ. ಸಿದ್ಧರಾಮಯ್ಯನವರ ಕವಿತೆಯ ಸಾಲು, ಕವಿಯ ಮಹತ್ವದ ಜೊತೆಗೆ, ಅವರ ಕುರಿತ ಟೀಕೆಗಳಿಗೆ ಉತ್ತರದಂತೆಯೂ ಇದೆ.

‘ಬಡವರ ನಗುವಿನ ಶಕ್ತಿಯ ನೆನಪಿಗೆ’ ಎನ್ನುವುದು ಸಂಕಲನದ ಶೀರ್ಷಿಕೆಯೊಂದಿಗೆ ತಳುಕು ಹಾಕಿಕೊಂಡಿರುವ ವಿಶೇಷಣ. ಈ ನೆನಪು ಅರ್ಥಪೂರ್ಣವಾಗಿ ದಾಖಲುಗೊಳ್ಳುವುದರಲ್ಲಿ ಸಂಪಾದಕ ಜೋಡಿಯ ಶ್ರಮ ಗಮನಾರ್ಹ.

**ಸಂ: ಡಾ. ಶಿವರಾಜ ಬ್ಯಾಡರಹಳ್ಳಿ, ಮುದಲ್ ವಿಜಯ್; ಪು: 152; ಬೆ: ₹ 160; ಪ್ರ: ವಿಹಾ ಪುಸ್ತಕ; ಫೋನ್: 9844467351.**